# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ: 19.03.2022ರಂದು ಪೂರ್ವಾಹ್ನ 11.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ನಡೆದ ವ್ಯವಸ್ಥಾಪನಾ ಮಂಡಳಿಯ **56ನೇ ವಿಶೇಷ ಸಭೆಯ ನಡವಳಿ.**

| ಉಪಸ್ಥಿತರು | |
|---|---|
| **ಡಾ. ವಿದ್ಯಾಶಂಕರ್.ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ. ಆರ್. ರಾಜಣ್ಣ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ<br>ಮೈಸೂರು ಜಿಲ್ಲೆ | **ಶ್ರೀ ಪುಟ್ಟಣ್ಣ**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಕಚೇರಿ ವಿಳಾಸ : ನಂ.5009<br>5ನೇ ಮಹಡಿ, ಶಾಸಕರ ಭವನ- 5<br>ಬೆಂಗಳೂರು – 560 001 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು | **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 |
| **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 | **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ, ಮೈಸೂರು – 570 023 |
| **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 | **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 |
| **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಬಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ, ಮೈಸೂರು – 570 004 | -- |

ಕುಲಪತಿಗಳು

ಕುಲಸಚಿವರು

| ಅನುಪಸ್ಥಿತರು | |
|---|---|
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ, ಮಂಗಳ ಗಂಗೋತ್ರಿ,<br>ಮಂಗಳೂರು – 574 199 |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು, ಸಭೆಯಲ್ಲಿ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಪ್ರಾರಂಭಿಸುವುದಕ್ಕಿಂತ ಮುಂಚೆ ಈ ಹಿಂದೆ ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯಲ್ಲಿ ಚರ್ಚೆಗೊಂಡ ಎರಡು ವಿಷಯಗಳಿಗೆ ಸಂಬಂಧಿಸಿದಂತೆ (1) ಡಾ. ಪವಿತ್ರ.ಎಂ, ಅತಿಥಿ ಉಪನ್ಯಾಸಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರ ಪದನಾಮದಲ್ಲಿ ಬದಲಾವಣೆ ಮಾಡುವುದರ ಬಗ್ಗೆ (ವಿಷಯ ಸಂಖ್ಯೆ : 167.10) ಹಾಗೂ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ವಿಷಯಗಳಡಿಯಲ್ಲಿ ಚರ್ಚೆಗೊಂಡ ಸಹಭಾಗಿತ್ವ ಸಂಸ್ಥೆಗಳ ಸ್ಥಾಪನೆ, ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ 2009-10ರಿಂದ 2015-16ರವರೆಗೆ 7 ಆರ್ಥಿಕ ವರ್ಷಗಳ ಅವಧಿಯಲ್ಲಿ ವಿ.ವಿ.ನಿಲಯಕ್ಕೆ ಉಂಟಾಗಿರುವ ಆರ್ಥಿಕ ನಷ್ಟದ ಬಗ್ಗೆ ಆಗಿದ್ದ ತೀರ್ಮಾನಗಳ ಕುರಿತು ಕ್ರಮವಾಗಿ ಮಾನ್ಯ ಸದಸ್ಯರುಗಳಾದ ಶ್ರೀ ಪುಟ್ಟಣ್ಣರವರು ಹಾಗೂ ಶ್ರೀ ಎಲ್. ನಾಗೇಂದ್ರರವರು ವಿಶ್ವವಿದ್ಯಾನಿಲಯಕ್ಕೆ ಬರೆದ ಪತ್ರಗಳ ಕುರಿತು ಸೂಕ್ತ ಸಮಜಾಯಿಷಿಯನ್ನು ನೀಡಿದರು. ನಂತರ, ವಿಷಯ ಸಂಖ್ಯೆ: 167.10ರ ಕುರಿತು ಮಾನ್ಯ ಸದಸ್ಯರಾದ ಶ್ರೀ ಪುಟ್ಟಣನವರು ಮಾತನಾಡಿ, ಡಾ. ಪವಿತ್ರ.ಎಂ. ಇವರಿಗೆ ನಿಯಮಾನುಸಾರ ಸದರಿಯವರು ಕೆಲಸಕ್ಕೆ ಸೇರಿದ ದಿನಾಂಕದಿಂದ ಉಪನ್ಯಾಸಕರು (ತಾತ್ಕಾಲಿಕ) ಎಂದು, 2016ರಿಂದ ಜಾರಿಗೆ ಬಂದಂತೆ ಸಹಾಯಕ ಪ್ರಾಧ್ಯಾಪಕ (ತಾತ್ಕಾಲಿಕ) ಎಂತಲೂ, ಪದನಾಮವನ್ನು ನೀಡುವಂತೆ ಸೂಚಿಸಿದರು.

ನಂತರ, ಅಧ್ಯಕ್ಷರು ವಿಷಯಸೂಚಿ ಪ್ರಕಾರ 56ನೇ ವಿಶೇಷ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಆರಂಭಿಸಿದರು.

**ವಿಷಯ ಸಂಖ್ಯೆ : 56.01**

ಅ) ದಿನಾಂಕ: 05.02.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 05.02.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸುವ ಬಗ್ಗೆ.

**ಅ) ದಿನಾಂಕ: 05.02.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 05.02.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 167ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.**

* * * * * * *

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ : 56.02**

ವಿಷಯ : ವಿ.ವಿ.ನಿಲಯದ ವತಿಯಿಂದ ಗೌರವ ಡಾಕ್ಟರೇಟ್ **(Doctor of Literature – D.Litt.)** ಪ್ರಶಸ್ತಿ ನೀಡಲು ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಸೂಚಿಸುವುದರ ಕುರಿತು.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 17ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಏಪ್ರಿಲ್ 2022ರ ಮಾಹೆಯಲ್ಲಿ ನಡೆಸಲು ಉದ್ದೇಶಿಸಿದ್ದು, ಸದರಿ ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ/ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor of Literature – D.Litt.) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸೂಚಿಸಲು ವಿಶೇಷ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಆಯ್ಕೆ ಮಾಡಿದ ವ್ಯಕ್ತಿಗಳ ಹೆಸರುಗಳನ್ನು "ಪರಿಶೀಲನಾ ಸಮಿತಿ" ಯ ಮುಂದೆ ಮಂಡಿಸಬೇಕಾಗಿರುತ್ತದೆ. ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡುವ ಗರಿಷ್ಠ ಮೂರು ಮಂದಿಯ ಹೆಸರುಗಳನ್ನು ಅಂತಿಮಗೊಳಿಸಲು ಘನತೆವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಬೇಕಾಗಿರುತ್ತದೆ.

ಆದುದರಿಂದ, ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ ಮಟ್ಟದಲ್ಲಿ ಪರಿಶೀಲನಾ ಸಮಿತಿ ರಚನೆಯಾಗಿದ್ದು, ಕನಿಷ್ಠ 10 ಹೆಸರುಗಳನ್ನು ಪ್ಯಾನೆಲ್ ಗೆ ಕೊಡಬೇಕಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರುಗಳು ಅವರುಗಳಿಗೆ ಅರ್ಹರೆಂದು ಕಂಡುಬಂದ ಹೆಸರುಗಳನ್ನು ಪಟ್ಟಿ ಮಾಡಿ ಪಟ್ಟಿಯಲ್ಲಿ ತೋರಿಸುವಂತೆ ಸೂಚಿಸಿದರು. ಪಟ್ಟಿಯಲ್ಲಿನ ಹೆಸರುಗಳ ವಿವರಗಳು ಈ ಕೆಳಗಿನಂತಿವೆ:

| ಕ್ರಮ ಸಂಖ್ಯೆ | ಮಾನ್ಯ ಸದಸ್ಯರುಗಳ ಹೆಸರು | ಮಾನ್ಯ ಸದಸ್ಯರುಗಳು ಶಿಫಾರಸ್ಸು ಮಾಡಿದ ವ್ಯಕ್ತಿಗಳ ಹೆಸರುಗಳು |
|---|---|---|
| 01. | ಶ್ರೀ ಪುಟ್ಟಣ್ಣ<br>ವಿಧಾನ ಪರಿಷತ್ ಸದಸ್ಯರು | **1. ಶ್ರೀ ಎಸ್.ಪಿ. ಬಾಲಸುಬ್ರಹ್ಮಣ್ಯಂ**<br>ಹಿನ್ನೆಲೆ ಗಾಯಕರು<br>**2. ಪ್ರೊ. ಎನ್. ಆರ್. ಶೆಟ್ಟಿ**<br>ಶೈಕ್ಷಣಿಕ ತಜ್ಞರು<br>**3. ಡಾ. ಹೆಚ್.ಎ. ರಂಗನಾಥ್**<br>ಮಾಜಿ ಎನ್.ಎ.ಎ.ಸಿ. ಡೈರೆಕ್ಟರ್ |
| 02. | ಶ್ರೀ ಅಡಗೂರು ಹೆಚ್. ವಿಶ್ವನಾಥ್<br>ವಿಧಾನ ಪರಿಷತ್ ಸದಸ್ಯರು | **ಶ್ರೀ ಮುತ್ತುರಾಜ್**<br>ಸಮಾಜ ಸೇವಕರು (ವೃತ್ತಿಯಲ್ಲಿ ಕ್ಷೌರಿಕರು) |
| 03. | ಡಾ.. ಆರ್.ಹೆಚ್. ಅಕಮಂಚಿ | **1. ಶ್ರೀ ಗುತ್ತಲ್ ರಂಗಾಚಾರ್ಯ**<br>ಶಿಕ್ಷಣ ತಜ್ಞರು<br>**2. ಶ್ರೀ ಆನಂದ್ ಸಂಕೇಶ್ವರ್**<br>ವಿ.ಆರ್.ಎಲ್. ಲಾಜಿಸ್ಟಿಕ್ ಸಂಸ್ಥೆಯ ಹಾಗೂ ದಿಗ್ವಿಜಯ ಮತ್ತು ವಿಜಯವಾಣಿ ದಿನಪತ್ರಿಕೆಗಳ ಮಾಲೀಕರು. |

ಕುಲಪತಿಗಳು

ಕುಲಸಚಿವರು

| ಕ್ರಮ ಸಂಖ್ಯೆ | ಮಾನ್ಯ ಸದಸ್ಯರುಗಳ ಹೆಸರು | ಮಾನ್ಯ ಸದಸ್ಯರುಗಳು ಶಿಫಾರಸ್ಸು ಮಾಡಿದ ವ್ಯಕ್ತಿಗಳ ಹೆಸರುಗಳು |
|---|---|---|
| 04. | ಡಾ. ಪಿ.ಆರ್. ಪ್ರದೀಪ್ | ಡಾ. ಆನಂದ್, ತೀರ್ಥಹಳ್ಳಿ<br>ಸಾವಯುವ ಕೃಷಿ ತಜ್ಞರು |
| 05. | ಶ್ರೀ ಎನ್. ಕೃಷ್ಣೇಗೌಡ | ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ<br>ಶೈಕ್ಷಣಿಕ ತಜ್ಞರು ಹಾಗೂ<br>ಹೆಸರಾಂತ ಬರಹಗಾರರು |
| 06. | ಪ್ರೊ. ಯಶಸ್ವಿನಿ.ಎಸ್. | 1. ಪ್ರೊ. ಎಂ.ಕೆ.ಶ್ರೀಧರ್<br>ಕುಲಪತಿಗಳು,<br>ಚಾಣಕ್ಯ ವಿಶ್ವವಿದ್ಯಾನಿಲಯ |
| 06. | ಪ್ರೊ. ಎಸ್. ವಿದ್ಯಾಶಂಕರ್ | 1. ಡಾ. ಎ.ವಿಎಸ್. ಮೂರ್ತಿ<br>ಶೈಕ್ಷಣಿಕ ತಜ್ಞರು<br>2. ಶ್ರೀ ಇ.ಎಸ್. ಚಕ್ರವರ್ತಿ<br>ಉಪಾಧ್ಯಕಷರು, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್<br>3. ಪ್ರೊ. ಟಿ. ಶಿವಣ್ಣ<br>ಶೈಕ್ಷಣಿಕ ತಜ್ಞರು |

ಪಟ್ಟಿಯಲ್ಲಿ ತೋರಿಸಿರುವ ವ್ಯಕ್ತಿಗಳ ಹೆಸರುಗಳನ್ನು ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಸೂಚಿಸುವುದರ ಜೊತೆಗೆ ಇನ್ನೂ ಕೆಲವು ವ್ಯಕ್ತಿಗಳ ಹೆಸರುಗಳನ್ನು ಕುಲಪತಿಗಳು ಸೂಚಿಸಿ ವಿಶ್ವವಿದ್ಯಾನಿಲಯಕ್ಕೆ ಒಳ್ಳೆಯ ಹೆಸರು ಬರುವಂತೆಯೂ ಹಾಗೂ ಡಾಕ್ಟರೇಟ್ ಪ್ರಶಸ್ತಿಗೆ ಶಿಫಾರಸ್ಸು ಮಾಡಿದ ವ್ಯಕ್ತಿಗಳ ವ್ಯಕ್ತಿ ಪರಿಚಯವನ್ನು (ಬಯೋ-ಡೇಟಾ) ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ಪರಿಶೀಲನಾ ಸಮಿತಿಗೆ ಸಲ್ಲಿಸುವಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮುಂದುವರೆದು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು, ಇವರ ಪತ್ರ ಸಂಖ್ಯೆ : ಜಿ.ಎಸ್. 10 ಕೆ.ಒ.ಎಂ.2022 ದಿನಾಂಕ : 07.02.2022ರ ಪ್ರಕಾರ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ರಚಿಸಬೇಕಾಗಿರುವ ತಜ್ಞರ ಪರಿಶೀಲನಾ ಸಮಿತಿಗೆ ಮಾನ್ಯ ಪ್ರೊ. ದಯಾನಂದ ಅಗ್ಸರ್, ಮಾನ್ಯ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಇವರನ್ನು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ನಾಮ ನಿರ್ದೇಶನ ಮಾಡಿರುವುದಕ್ಕೆ ಸಭೆಯು ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ : 56.03</u>

ವಿಷಯ : ಹಣಕಾಸು ಸಮಿತಿಯ 84ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.

* * * * *

ದಿನಾಂಕ : 19.03.2022ರಂದು ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ 84ನೇ ಸಭೆಯ ನಡವಳಿಯನ್ನು ವ್ಯವಸ್ಥಾಪನಾ ಮಂಡಳಿಯ 56ನೇ ವಿಶೇಷ ಸಭೆಗೆ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * * *

<u>ತೀರ್ಮಾನ</u> :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ವಿ.ವಿ.ನಿಲಯದ 84ನೇ ಹಣಕಾಸು ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸಿತು.

* * * * * * *

ಕುಲಪತಿಗಳು

ಕುಲಸಚಿವರು

ವಿಶೇಷ ಸಭೆಯಲ್ಲಿ ಚರ್ಚೆಗೆ ಇಟ್ಟಿದ್ದ ಎಲ್ಲ ವಿಷಯಗಳನ್ನು ಚರ್ಚಿಸಿದ ನಂತರ, ಮಾನ್ಯ ಕುಲಪತಿಗಳು ಸಭೆಯ ಅನುಮತಿಯನ್ನು ಪಡೆದು ಕೆಳಕಂಡ ಎರಡು ಟೇಬಲ್ ಅಜೆಂಡಗಳ ಬಗ್ಗೆ ಚರ್ಚಿಸಿದರು.

(1) ವಿ.ವಿ.ನಿಲಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ ಗ್ರೇಡೆಡ್ ಪೇ ವ್ಯವಸ್ಥೆ ಕಲ್ಪಿಸುವುದರ ಬಗ್ಗೆ ಈಗಾಗಲೇ ಸಮಿತಿಯನ್ನು ರಚಿಸಿದ್ದು, ಸಮಿತಿಯು ವರದಿ ನೀಡಿರುತ್ತದೆ. ಆದರೆ, ಸಮಿತಿಯು ನೀಡಿದ ವರದಿಯಲ್ಲಿ ಎಷ್ಟು ವರ್ಷಗಳ ಸೇವೆ ಸಲ್ಲಿಸಿದವರಿಗೆ ಗ್ರೇಡೆಡ್ ಪೇ ಕೊಡುವುದು ಸೂಕ್ತವೆಂಬ ಅಂಶವನ್ನು ಸೂಚಿಸಿಲ್ಲದಿರುವುದರಿಂದ ಗ್ರೇಡೆಡ್ ಪೇ ನೀಡಬೇಕಾದಲ್ಲಿ ಕನಿಷ್ಠ ಎಷ್ಟು ವರ್ಷಗಳ ಸೇವೆ ಸಲ್ಲಿಸಿದವರನ್ನು ಪರಿಗಣಿಸುವುದು ಸೂಕ್ತವೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕನಿಷ್ಠ '7' ವರ್ಷಗಳ ಕಾಲ ನಿರಂತರ ಸೇವೆ ಸಲ್ಲಿಸಿರುವ ನೌಕರರುಗಳಿಗೆ ಗ್ರೇಡೆಡ್ ಪೇ ನೀಡುವುದು ಸೂಕ್ತವೆಂದು ಅಭಿಪ್ರಾಯ ಪಡುವುದರ ಜೊತೆಗೆ ಭವಿಷ್ಯದಲ್ಲಿ '7' ವರ್ಷಗಳ ಸೇವೆಯನ್ನು ಪೂರ್ಣಗೊಳಿಸುವ ನೌಕರರುಗಳಿಗೆ ಸ್ವಾಭಾವಿಕವಾಗಿ ಗ್ರೇಡೆಡ್ ಪೇ ಕೊಡುವುದು ಸರಿಯೆಂದು ಸಭೆಯು ತಿಳಿಸಿತು. ಇದಕ್ಕೆ ಪ್ರತಿಕ್ರಿಯಿಸದ ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್ ಇವರು ಮಾತನಾಡಿ, ಪ್ರಸ್ತುತ ವಿ.ವಿ.ನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರುಗಳ ಸಾಮರ್ಥ್ಯವನ್ನು (Strength) ಗಣನೆಗೆ ತೆಗೆದುಕೊಂಡು ಕ್ರಮ ವಹಿಸುವುದು ಸೂಕ್ತವೆಂಬ ಸಲಹೆಯನ್ನು ನೀಡಿದರು. ನಂತರ, ಸಭೆಯು ಈ ಬಗ್ಗೆ ಕ್ರಮ ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಿತು. ಮುಂದುವರೆದು, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಮಾತನಾಡಿ, ಕೆಲಸಕ್ಕೆ ಸೇರಿ '5' ವರ್ಷಗಳನ್ನು ಪೂರ್ಣಗೊಳಿಸಿರುವ ನೌಕರರುಗಳಿಗೆ ವೇತನವನ್ನು ಹೆಚ್ಚು ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

(2) ನಂತರ, ಮಾನ್ಯ ಕುಲಪತಿಗಳು ಮಾತನಾಡಿ, 2022ರ ಮೇ ತಿಂಗಳ ಅಂತ್ಯದಲ್ಲಿ ನಿಯಮಾನುಸಾರ ನನ್ನ ಕುಲಪತಿ ಹುದ್ದೆಯ ಸೇವಾ ಅವಧಿಯು ಪೂರ್ಣಗೊಳ್ಳುತ್ತಿರುವುದಾಗಿಯೂ, ಈ ಸಂಬಂಧ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳ ಕಛೇರಿಯಿಂದ "ಶೋಧನಾ ಸಮಿತಿ" ಯನ್ನು ರಚಿಸಿ, ಕುಲಪತಿಗಳನ್ನು ಆಯ್ಕೆ ಮಾಡುವ ಸಂಬಂಧ ವ್ಯವಸ್ಥಾಪನಾ ಮಂಡಳಿ ವತಿಯಿಂದ ಶೋಧನಾ ಸಮಿತಿಗೆ ಒಬ್ಬರು ಸದಸ್ಯರ ಹೆಸರನ್ನು ಸೂಚಿಸಿ ಕಳುಹಿಸಿಕೊಡುವಂತೆ ವಿ.ವಿ.ನಿಲಯಕ್ಕೆ ಪತ್ರ/ಇ-ಮೇಲ್ ಬಂದಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣರವರು ಪ್ರೊ. ಸಂತೋಷ್ ಪಾಂಡ, ಮಾಜಿ ಅಧ್ಯಕ್ಷರು, ಎನ್.ಸಿ.ಟಿ.ಇ., ಮತ್ತು ಹಾಲಿ ನಿರ್ದೇಶಕರು, ದೂರ ಶಿಕ್ಷಣ, ಇಂದಿರಾ ಗಾಂಧಿ ನ್ಯಾಷನಲ್ ಓಪನ್ ಯೂನಿವರ್ಸಿಟಿ (ಇಗ್ನೋ), ಇವರ ಹೆಸರನ್ನು ಸೂಚಿಸಿದರು. ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ತೇಜಸ್ವಿ ವಿ.ಕಟ್ಟಿಮನಿ, ಕುಲಪತಿಗಳು, ಸೆಂಟ್ರಲ್ ಟ್ರೈಬಲ್ ಯೂನಿವರ್ಸಿಟಿ, ಆಂಧ್ರಪ್ರದೇಶ್, ಇವರ ಹೆಸರನ್ನು ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಭೆಯು ಮಾನ್ಯ ಕುಲಪತಿಗಳು ಸೂಚಿಸಿದ ಪ್ರೊ. ತೇಜಸ್ವಿ ವಿ.ಕಟ್ಟಿಮನಿ, ಕುಲಪತಿಗಳು, ಸೆಂಟ್ರಲ್ ಟ್ರೈಬಲ್ ಯೂನಿವರ್ಸಿಟಿ, ಇವರನ್ನು ಹೆಸರನ್ನು "ಶೋಧನಾ ಸಮಿತಿ" ಗೆ ಸದಸ್ಯರನ್ನಾಗಿ ಸೂಚಿಸಿ ಕಳುಹಿಸಲು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 56ನೇ ವಿಶೇಷ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು